# 'ಅನಘಾ– ಅದ್ಭುತಚಾರಿತ್ರಾ'

ಮಾತಾ ತ್ಯಾಗಮಯೀ

ಭಾರತೀಯ ಧಾರ್ಮಿಕ ಪರಂಪರೆಯ ಒಂದು ಸುಂದರ ಪುಷ್ಪ ಶ್ರೀಶಾರದಾದೇವಿ. ಅವರ ಶಾಂತ, ಆದರೆ ದಿವ್ಯಜೀವನದ ಹಲವು ಮಜಲುಗಳನ್ನು ಹೂವಿನ ಎಸಳುಗಳನ್ನು ಒಂದೊಂದಾಗಿ ಮೃದುವಾಗಿ ಬಿಡಿಸಿ ನೋಡುತ್ತ ಸುಖಿಸುವಂತೆ, ತೆರೆತೆರೆದು ನಮ್ಮ ಮುಂದೆ ಇಟ್ಟಿರುವವರು ಬೆಂಗಳೂರಿನ ಭವತಾರಿಣೀ ಆಶ್ರಮದ ಮಾತಾ ತ್ಯಾಗಮಯೀ ಅವರು.

### ಆಧ್ಯಾತ್ಮಿಕ ಶಿಖರ

**ನ**ಮ್ಮ ಸನಾತನ ಸಂಸ್ಕೃತಿಯ ಅಧ್ಯಾತ್ಮ ಪರಂಪರೆಯು ಅಸಂಖ್ಯ ಸದ್ವಿಚಾರಗಳ ಸಮುಚ್ಚಯ, ಅಸಂಖ್ಯ ಸದ್ಭಾವನೆಗಳ ಸಮನ್ವಯ. ಅಸಂಖ್ಯ ಸಂತಮಹಾಂತರ, ಅವರ ತತ್ತ್ವಗಳ ಕೊಡುಗೆ ಇಲ್ಲಿ ಸಮಾವೇಶಗೊಂಡಿದೆ. ವಿಶ್ವದ ಇತರ ರಾಷ್ಟ್ರಗಳ ನಾಗರಿಕತೆಗಳು ಇನ್ನೂ ಕಣ್ಣು ತೆರೆದಿರದ ಕಾಲದಲ್ಲೂ, ಇತಿಹಾಸದ ದಾಖಲೆ ಆರಂಭವಾಗುವ ಮುಂಚೆಯೇ, ನಮ್ಮ ಸನಾತನ ಸಂಸ್ಕೃತಿ ತನ್ನ ತಪೋಮಯ ಅಂತಃಸತ್ವದ ಬಲದಿಂದ ಉತ್ತಮ ಮಾನವತೆಯ ಗುರಿಯನ್ನು ಇಡೀ ವಿಶ್ವಕ್ಕೆ ಸಾರಿ ಹೇಳಿತು. ಅಸತ್ಯದಿಂದ ಸತ್ಯದೆಡೆಗೆ, ಮನುಷ್ಯತ್ವದಿಂದ ದೈವತ್ವದೆಡೆಗೆ ಸಾಗುವುದು – ಇದು ನಮ್ಮ ಗುರಿ. ಇದನ್ನು ಸಾಧಿಸಲು ಶಿಸ್ತುಬದ್ಧವಾದ ಯೋಗಮಾರ್ಗವನ್ನು ನಡೆಸಬೇಕು. ಈ ಆದರ್ಶವನ್ನು ಇಡೀ ಮಾನವತೆಯ ಮುಂದೆ ನಮ್ಮ ಹೆಮ್ಮೆಯ ಅಧ್ಯಾತ್ಮ ಪರಂಪರೆ ತೆರೆದಿಟ್ಟಿದೆ.

> **ನಾನು ಕಣ್ಣಾರೆ ಕಾಣುತ್ತಿದ್ದೇನೆ– ಶ್ರೀರಾಮಕೃಷ್ಣರೇ ಎಲ್ಲ ರೂಪಗಳಲ್ಲಿ ಇದ್ದಾರೆ. ಕುರುಡರು, ಕುಂಟರು ಎಲ್ಲ ಅವರೇ; ಜೀವಿಗಳ ನೋವು–ಸಂಕಟ ಎಲ್ಲ ಅವರದೇ. ಆದ್ದರಿಂದ ಅವರೆಲ್ಲರ ದುಃಖವನ್ನು ದೂರಮಾಡಲು ನಾನೂ ಕೆಲಸಮಾಡಬೇಕಾಗಿದೆ. ನನ್ನ ಸ್ವಂತ ಸುಖ ವಿಶ್ರಾಂತಿ ನಿದ್ರೆಗಳನ್ನು ಬಿಟ್ಟು ಎಲ್ಲ ಜೀವಿಗಳ ಯೋಗಕ್ಷೇಮಕ್ಕಾಗಿ ದುಡಿಯುವುದೊಂದೇ ದಾರಿ. ಎಲ್ಲ ಜೀವಿಗಳಿಗೂ ಒಳ್ಳೆಯದು ಮಾಡುವುದೇ ಕರ್ತವ್ಯ. ಎಲ್ಲರಿಗೂ ವಿಶ್ರಾಂತಿ ಇದೆ. ನನಗೆ ಮಾತ್ರ ಇಲ್ಲ.**
>
> – *ಶ್ರೀಶಾರದಾದೇವಿ*

ನಮ್ಮ ದೇಶವು ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗಲೂ ನಾವು ಬಾಹ್ಯಜಗತ್ತಿನ ಅಧಿಕಾರ–ಐಶ್ವರ್ಯ–ಸುಖ–ಸಮೃದ್ಧಿ ಭೋಗಭಾಗ್ಯಗಳನ್ನು ತಿರಸ್ಕರಿಸಿದೆವು. ಅವುಗಳಲ್ಲಿ ತೃಪ್ತಿ ಕಾಣದೆ, ಆಧ್ಯಾತ್ಮಿಕ ಸತ್ಯದ ಉತ್ತುಂಗ ಶಿಖರದ ಅನ್ವೇಷಣೆಯಲ್ಲಿ ತೊಡಗಿ ಒಳಮುಖರಾದೆವು. ಇದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಸ್ವಾಮಿ ವಿವೇಕಾನಂದರು ಸರ್ವಧರ್ಮಸಮ್ಮೇಳನದ ಮೊದಲ ಅಧಿವೇಶನದಲ್ಲಿ ನುಡಿದಂತೆ "ಸಕಲ ಧರ್ಮಗಳ ತಾಯಿನಾಡಿಗೆ ಸೇರಿದವನೆಂಬ ಹೆಮ್ಮೆ ನನ್ನದು. ಎಲ್ಲ ಧರ್ಮಗಳೂ ಸತ್ಯವೆಂದು ಸಾರಿದ, ಪರಸ್ಪರ ಸಹನೆ ಮತ್ತು ಸಹಿಷ್ಣುತೆಯ ಆದರ್ಶವನ್ನು ಬದುಕಿ ಜಗತ್ತಿಗೆಲ್ಲ ತೋರಿಸಿದ ರಾಷ್ಟ್ರಕ್ಕೆ ಸೇರಿದವನೆಂಬ ಹೆಮ್ಮೆ ನನ್ನದು." ಹೀಗೆ ನಮ್ಮ ರಾಷ್ಟ್ರದ ಆದರ್ಶ, ಮಾನವೀಯ ಮೌಲ್ಯಗಳಲ್ಲಿ ನೆಲೆನಿಂತು, ಉದಾತ್ತ ಚಾರಿತ್ರ್ಯವನ್ನು ಗಳಿಸಿಕೊಂಡು ಆಧ್ಯಾತ್ಮಿಕ ಸಾಕ್ಷಾತ್ಕಾರದ ಸಿದ್ಧಿಯನ್ನೇ ಧ್ಯೇಯವಾಗಿರಿಸಿಕೊಂಡ ಆಧ್ಯಾತ್ಮಿಕ ಆದರ್ಶವಾಗಿದೆ.

ಒಂದು ಪರಂಪರೆ ಇಷ್ಟೊಂದು ಸರ್ವತೋಮುಖವಾಗಿ ಮಾನವತೆಗೆ ಬೆಳಕನ್ನು ನೀಡುವಂತಾಗಬೇಕಾದರೆ, ಅದರ ಹಿನ್ನೆಲೆಯಲ್ಲಿ ಯಾವ ಮಟ್ಟದ ದೀರ್ಘಕಾಲದ ತಪಸ್ಸು ಮತ್ತು ಅಂತಶ್ಶೋಧನೆಯ ಕೃಷಿ ನಡೆದಿರಬಹುದು! ಇಂತಹ ಘನತೆವೆತ್ತ ಅಧ್ಯಾತ್ಮ ಪರಂಪರೆಗೆ ಯಾರು ನೈಜವಾದ ಕೊಡುಗೆ ನೀಡಬಲ್ಲರು? ಯಾರು ಆಧಿಕಾರಿಕ ಪುರುಷರಾಗಿ ಭಗವಂತನಿಂದ ಶಕ್ತಿಯನ್ನು ಪಡೆದುಕೊಂಡು, ಅದೇ ಕಾರ್ಯಕ್ಕಾಗಿ ಅವತರಿಸಿರುತ್ತಾರೆಯೋ ಅವರಿಗೆ ಮಾತ್ರ ಈ ಅರ್ಹತೆ ಇದೆ. ಅಥವಾ ಯಾರು ತಪೋಮಯ ಜೀವನ ಪರಿಪಾಕದೊಡನೆ ಪರಮ ತತ್ತ್ವದ ಅನುಭಾವದಲ್ಲಿ ನೆಲೆನಿಂತಿದ್ದಾರೆಯೋ ಅವರು ಮಾತ್ರ ನಮ್ಮ ಆಧ್ಯಾತ್ಮಿಕ ಪರಂಪರೆಯನ್ನು ಸಮೃದ್ಧಗೊಳಿಸಬಲ್ಲರು. ಈ ಎರಡೂ ದೃಷ್ಟಿಗಳಿಂದ ನಮ್ಮ ಆಧ್ಯಾತ್ಮಿಕ ಪರಂಪರೆಯನ್ನು ಸಮೃದ್ಧಗೊಳಿಸಿದ ಒಬ್ಬ ಮಹಾವ್ಯಕ್ತಿಯೆಂದರೆ, ಶ್ರೀಮಾತೆ ಶ್ರೀಶಾರದಾದೇವಿಯವರು.

### ಸಾಮಾನ್ಯ ನಡೆನುಡಿ–ಅಸಾಮಾನ್ಯ ವ್ಯಕ್ತಿತ್ವ

ಶ್ರೀಮಾತೆಯವರು ತಮ್ಮ ಪರಿಶುದ್ಧ ಜೀವನದ ಮೂಲಕ, ತಮ್ಮ ಅದ್ವಿತೀಯ ಅನುಭಾವದಿಂದ ಒಡಮೂಡಿದ ನುಡಿಮುತ್ತುಗಳ ಮೂಲಕ, ದಿನದಿನದ ಸಾಮಾನ್ಯವೆನಿಸುವ ನಡೆನುಡಿ–ವ್ಯವಹಾರಗಳ ಮೂಲಕ, ನಮ್ಮ ಪರಂಪರೆಗೆ ಗಣನೀಯ ಕೊಡುಗೆಯನ್ನು ಸಲ್ಲಿಸಿದ್ದಾರೆ. ಶ್ರೀಮಾತೆಯವರು ಶ್ರೀರಾಮಕೃಷ್ಣರ ಲೀಲಾಜೀವನವನ್ನು ಪೂರ್ಣಗೊಳಿಸಲು ಅವತರಿಸಿದ ಜಗಜ್ಜನನಿಯೇ ಆಗಿದ್ದರು. ಲೋಕದ ಜನರಿಗೆ ಜ್ಞಾನದಾನಮಾಡಲು ಅವತರಿಸಿದ ಸರಸ್ವತಿಯಾಗಿದ್ದರು.

ಭಗವಂತನೊಂದಿಗೆ ತಮ್ಮ ಐಕ್ಯತೆಯ ಬೋಧೆಯ ಅರಿವು ಅವರಿಗೆ ಸದಾ ಇತ್ತು. ಒಮ್ಮೆ ಸ್ವಾಮಿ ತನ್ಮಯಾನಂದರು ಜಯರಾಂಬಾಟಿಗೆ ಬಂದಿದ್ದಾಗ ಶ್ರೀಮಾತೆಯವರ ಪಾದಪದ್ಮಗಳನ್ನು ಪೂಜಿಸಿ, ತಮ್ಮ ತಲೆಯ ಮೇಲಿರಿಸಿಕೊಂಡರು. ಆಗ ಶ್ರೀಮಾತೆಯವರು ಹೇಳುತ್ತಾರೆ, "ನೋಡು, ಹಾಗೆ ಮಾಡಬಾರದು. ಶಿರದಲ್ಲಿರುವ ಸಹಸ್ರಾರ ಕಮಲದಲ್ಲಿ ಶ್ರೀರಾಮಕೃಷ್ಣರು ವಾಸವಾಗಿರುತ್ತಾರೆ. ಅವರು ಸಾಕ್ಷಾತ್ ಭಗವಂತ." "ಅಮ್ಮ, ಶ್ರೀರಾಮಕೃಷ್ಣರು ಸ್ವಯಂ ಭಗವಂತನಾದರೆ ನೀವ್ಯಾರು?" ಎಂದು ಪ್ರಶ್ನಿಸಿದರು ಸ್ವಾಮೀಜಿ. ಶ್ರೀಮಾತೆಯವರು ಸ್ವಲ್ಪವೂ ಹಿಂಜರಿಯದೆ ನೇರವಾಗಿ ಹೇಳುತ್ತಾರೆ: "ನಾನು ಇನ್ನು ಯಾರಾದೇನು? ನಾನೂ ಕೂಡ ಭಗವತಿ."

ಶ್ರೀಮಾತೆಯವರು ತಮ್ಮ ಮಹಿಮೆಯನ್ನೆಲ್ಲ ಮರೆಮಾಚಿ ಸಾಮಾನ್ಯ ಮನುಷ್ಯರಂತೆ ಇದ್ದರೂ, ಸಾಕ್ಷಾತ್ಕಾರದ ಪರಮ ಗುರಿಯಲ್ಲಿ ನೆಲೆನಿಂತಿದ್ದರು. ತತ್ಫಲವಾಗಿ ಪ್ರಚಂಡ ಆಧ್ಯಾತ್ಮಿಕ ಶಕ್ತಿಯ ಆಗರವಾಗಿದ್ದರು. ಲೆಕ್ಕವಿಲ್ಲದಷ್ಟು ಸಲ ಸಮಾಧಿಯ ಅನುಭವವಾಗಿದ್ದರೂ ಅಷ್ಟೇ ಸಹಜವಾಗಿ ಅದನ್ನು ಯಾರಿಗೂ ಕಾಣಿಸದೆ ಗುಪ್ತವಾಗಿರಿಸಿದ್ದರು. ಸಮಾಧಿಯು ಅವರ ಸಹಜ ಸ್ವಭಾವವೇ ಆಗಿತ್ತು. ದಿನದಿನದ ಸಣ್ಣಪುಟ್ಟ ಕೆಲಸಕಾರ್ಯಗಳ ನಡುವೆಯೂ ಅವರ ಮನಸ್ಸು ಸದಾ ಒಂದು ಉನ್ನತ ಭಾವದಲ್ಲಿರುತ್ತಿತ್ತು. ಒಂದು ದಿನ ಶ್ರೀಮಾತೆಯವರು ಪೊರಕೆಯನ್ನು ಹಿಡಿದುಕೊಂಡು ಜಗುಲಿಯನ್ನು ಗುಡಿಸುತ್ತ ಹೇಳುತ್ತಾರೆ, "ಇದೇನಿದು, ನಾನು ನನ್ನ ಅನಂತ ಕೈಗಳಿಂದ ಕೆಲಸ ಮಾಡುತ್ತಿದ್ದರೂ ಕೆಲಸ ಮುಗಿಯುತ್ತಿಲ್ಲವಲ್ಲ!" – ಈ ಮಾತನ್ನು ಶ್ರೀಮಾತೆಯವರು ಹೇಳಿದ್ದು, ದೈವೀಭಾವದಿಂದ. ತಾವು ನಿರಂತರವಾಗಿ ಜನಮನವನ್ನು ಶುಚಿಗೊಳಿಸುವ ಕೆಲಸವನ್ನು ಮಾಡುತ್ತಿದ್ದರೂ ಅದು ಮುಗಿಯುವ ಸೂಚನೆಯೇ ಇಲ್ಲವಲ್ಲ, ಎಂಬ ಕಳಕಳಿಯಿಂದ.

ಶ್ರೀಮಾತೆ ಒಂದೆಡೆ ಹೇಳುತ್ತಾರೆ, "ನನ್ನ ಜೀವನವನ್ನು ಒಂದು ಆದರ್ಶವನ್ನಾಗಿ ಮಾಡುವುದಕ್ಕೆ ಎಷ್ಟು ಬೇಕೋ ಅದಕ್ಕಿಂತ ಹೆಚ್ಚಾಗಿಯೇ ಮಾಡಿದ್ದೇನೆ." ಭಗಿನಿ ನಿವೇದಿತಾ ಹೇಳುವಂತೆ, ಅತ್ಯಂತ ಸಾಧಾರಣ ಮಹಿಳೆಯರೂ ಸಾಧಿಸಬಹುದಾದ ವಿವೇಕ ಮತ್ತು ಮಾಧುರ್ಯಗಳು ಶ್ರೀಮಾತೆಯಲ್ಲಿ ಸಂಪೂರ್ಣವಾಗಿ ವಿಕಸಿತವಾಗಿವೆ.

**ಕಾರ್ಯತತ್ಪರತೆಯ ಸೇವಾದರ್ಶ**

ನಮ್ಮ ಪರಂಪರೆಗೆ ಶ್ರೀಮಾತೆಯವರ ಇನ್ನೊಂದು ವಿಶೇಷ ಕೊಡುಗೆ ಎಂದರೆ, ಸಾಧನೆಗೆ ನೀಡಿದಷ್ಟೇ ಪ್ರಾಮುಖ್ಯವನ್ನು ಸೇವೆಗೆ, ನಿಷ್ಕಾಮಕರ್ಮಕ್ಕೆ ಅವರು ನೀಡಿದ್ದು. ಮೊತ್ತಮೊದಲ ಬಾರಿ, ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣ ಮಹಾಸಂಘಕ್ಕೆ



ಸ್ವಂತ ಮೋಕ್ಷದೊಂದಿಗೆ ಜಗತ್ತಿನ ಹಿತಕ್ಕಾಗಿಯೂ ದುಡಿಯಬೇಕು ಎಂಬ ಆದರ್ಶವನ್ನು ಹಾಕಿಕೊಟ್ಟಾಗ, ವಿವಿಧ ಕಡೆಗಳಿಂದ ವಿರೋಧದ ಧ್ವನಿಗಳೆದ್ದರೂ, ಶ್ರೀಮಾತೆಯವರು ಯಾವಾಗಲೂ ಸೇವಾದರ್ಶವನ್ನು ಬೆಂಬಲಿಸಿದರು. ಈ ಯುಗಧರ್ಮ ತಪಸ್ಸಿಗೆ ಹೇಳಿ ಮಾಡಿಸಿದ್ದಲ್ಲ, ಈಗ ಏನಿದ್ದರೂ ಸೇವೆ ಎಂಬುದೇ ತಪಸ್ಸು ಎಂಬುದು ಅವರ ಸೂಕ್ಷ್ಮ ವಿವೇಕದೃಷ್ಟಿಗೆ ತಿಳಿದಿತ್ತು. ಅವರು ಸ್ವತಃ ಬಾಲ್ಯದಿಂದಲೂ ತಾಯಿತಂದೆಯರ , ಸೋದರರ, ಬರಗಾಲಪೀಡಿತ ಜನರ ಸೇವೆ ಮಾಡಿದರು; ವಿವಾಹವಾದ ಮೇಲೆ ಅತ್ತೆಯ, ಶ್ರೀರಾಮಕೃಷ್ಣರ, ಅವರ ಶಿಷ್ಯ–ಭಕ್ತವರ್ಗದ ಸೇವೆಯನ್ನು ಅವಿಶ್ರಾಂತವಾಗಿ ಮಾಡಿದರು. ಜಯರಾಂಬಾಟಿಯ ಗ್ರಾಮೀಣ ಪರಿಸರದಲ್ಲಿ, ಅಲ್ಲಿನ ಯಾವ ಅನಾನುಕೂಲಗಳನ್ನೂ ಗಣಿಸದೆ, ತಮ್ಮ ಕುಟುಂಬ ವರ್ಗದವರೆಲ್ಲರಿಗೆ ಸಹಾಯ–ಸಹಕಾರವನ್ನಿತ್ತರು, ದೂರದೂರದಿಂದ ಬರುವ ಭಕ್ತರಿಗೆಲ್ಲ ಊಟ ವಸತಿಯ ವ್ಯವಸ್ಥೆಯಿಂದ ಹಿಡಿದು ಮಂತ್ರ ಪ್ರದಾನ –ಆಧ್ಯಾತ್ಮಿಕ ಮಾರ್ಗದರ್ಶನದವರೆಗೆ ಪ್ರತಿಯೊಂದನ್ನೂ ತಾವೇ ಸ್ವತಃ ಮಾಡಿದರು. ಜಗತ್ತಿನ ಇತಿಹಾಸದಲ್ಲಿ ಗುರುವೊಬ್ಬರು ಶಿಷ್ಯರ ಸೇವೆಯನ್ನು ಇಷ್ಟೊಂದು ವ್ಯಾಪಕವಾಗಿ, ನಿಸ್ಪೃಹವಾಗಿ ಮಾಡಿದ್ದು ಇದೇ ಮೊದಲು ಎನ್ನಬಹುದು.

ಶ್ರೀಮಾತೆಯವರು ಹೇಳುತ್ತಾರೆ, "ಕೆಲಸ ಮಾಡದಿದ್ದರೆ ಮನಸ್ಸು ಆರೋಗ್ಯವಾಗಿರುತ್ತದೆಯೇ? ಆದ್ದರಿಂದ ಯಾವಾಗಲೂ ಒಂದಿಷ್ಟು ಉಪಯುಕ್ತವಾದ ಕೆಲಸಕಾರ್ಯಗಳನ್ನು ಮಾಡುತ್ತಿರಬೇಕು" ಎಂದು. ಡಾ.ಕಂಜೀಲಾಲ್ ಎಂಬ ಭಕ್ತರು ಪ್ರತಿಸಲ ಶ್ರೀಮಾತೆಯವರನ್ನು ಭೇಟಿಯಾಗಲು ಕೊಲ್ಕತಾದಿಂದ ಜಯರಾಂಬಾಟಿಗೆ ಹೋಗುವಾಗ, ಜೊತೆಯಲ್ಲಿ ಒಂದಿಷ್ಟು ಔಷಧಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಗ್ರಾಮದ ಜನರ ಶುಶ್ರೂಷೆಯನ್ನು ಮಾಡುವುದರ ಮೂಲಕ ಅವರು ಶ್ರೀಮಾತೆಯವರ

ಮೇಲಿನ ತಮ್ಮ ಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದರು. ಅವರು ಬಂದಾಗಲೆಲ್ಲ ಜನರ ಗುಂಪು ಶ್ರೀಮಾತೆಯವರ ಮನೆಯ ಮುಂದೆ ನೆರೆದಿರುತ್ತಿತ್ತು. ಇದನ್ನು ಕಂಡು ಶ್ರೀಮಾತೆಯವರು ಹೇಳುತ್ತಾರೆ: "ನನ್ನ ಮುದ್ದಿನ ಮಗ ಬಂದಿದ್ದಾನೆ, ಜನ ಸೇರದೆ ಇನ್ನೇನು?" – ತಮ್ಮ ಪುತ್ರನೊಬ್ಬನ ಸೇವಾಕಾರ್ಯ ಶ್ರೀಮಾತೆಯವರಿಗೆ ಎಷ್ಟು ಆನಂದವನ್ನು ತಂದಿತು, ನೋಡಿ.

**ಭರವಸೆ–ಔದಾರ್ಯಗಳ ಸಾಗರ**

ಶ್ರೀಮಾತೆಯವರ ಇನ್ನೊಂದು ಮಹತ್ವಪೂರ್ಣ ಕೊಡುಗೆ ಎಂದರೆ, ಭಗವನ್ನಾಮಜಪದ ಮಹತ್ವವನ್ನು ಎತ್ತಿ ಹಿಡಿದು, ಅದನ್ನು ಬಿಡದೆ ಮಾಡುವಂತೆ ಶಿಷ್ಯರಿಗೆ ಒತ್ತಿ ಹೇಳಿದ್ದು. ಪತಿತರಿಗೂ, ಪಾಪಿ–ತಾಪಿಗಳಿಗೂ ಮಂತ್ರವನ್ನು ನೀಡಿ, ಅವರೆಲ್ಲರ ಬಾಳಿಗೆ ಶ್ರೀಮಾತೆಯವರು ಭರವಸೆ ತುಂಬಿದರು. ತಮ್ಮ ಬಿಡುವಿಲ್ಲದ ಕೆಲಸಕಾರ್ಯಗಳ ನಡುವೆಯೂ, ಅವರು ಲಕ್ಷಗಟ್ಟಲೆ ಜಪ ಮಾಡುತ್ತಿದ್ದರು. ತಮ್ಮ ಕೊನೆಯ ಅನಾರೋಗ್ಯದ ದಿನಗಳಲ್ಲಿ 'ಮಂತ್ರವನ್ನು ತೆಗೆದುಕೊಂಡು ಜಪ ಮಾಡದಿರುವ, ತಮಗೆ ಗೊತ್ತಿರುವ–ಗೊತ್ತಿಲ್ಲದಿರುವ' ಮಕ್ಕಳೆಲ್ಲರ ಹಿತಕ್ಕಾಗಿ ರಾತ್ರಿಯಿಡೀ ಜಪ ಮಾಡುತ್ತಿದ್ದರು. ಮಂತ್ರದೀಕ್ಷೆ ನೀಡುವುದು ಎಂತಹ ಗುರುತರ ಜವಾಬ್ದಾರಿ! ಶ್ರೀಮಾತೆಯವರು ಅದನ್ನು ಅದೆಷ್ಟು ನಿಸ್ಪೃಹಭಾವದಿಂದ ನಿರ್ವಹಿಸಿದರು! ನಾಮಜಪದ ಬಗ್ಗೆ ಶ್ರೀಮಾತೆ ಹೀಗೆ ಹೇಳುತ್ತಾರೆ– "ಧ್ಯಾನ, ಜಪ ಮತ್ತು ಸದ್ಭಾವನೆಗಳಿಂದ ಪೂರ್ವಜನ್ಮದ ಪಾಪಗಳು ನಾಶವಾಗುತ್ತವೆ, ಕರ್ಮಪಾಶ ಕಳಚುತ್ತದೆ.. ನಾಮಜಪದಿಂದ ಎಲ್ಲವೂ ಸಾಧ್ಯ. ನಾಮಜಪದಿಂದ ಕುಂಡಲಿನಿಯೇ ಜಾಗೃತವಾಗುತ್ತದೆ...ಹೇಗೆ ಗಡಿಯಾರವು ನಿರಂತರವಾಗಿ *ಟಿಕ್ ಟಿಕ್* ಸದ್ದು ಮಾಡುತ್ತಿರುತ್ತದೋ ಅದೇ ರೀತಿ ನೀನು ಬಿಡದೆ ಇಷ್ಟದೇವರನ್ನು ಸ್ಮರಿಸು."

ಭಗವಂತನ ಶಕ್ತಿಯು ಅವತರಿಸಿ ಬಂದಾಗ ಧರ್ಮವು ಸಚೇತನಗೊಳ್ಳುತ್ತದೆ, ಆಗ ಧರ್ಮದ ಆಚಾರ–ವಿಚಾರಗಳಲ್ಲಿ, ನೀತಿ–ನಿಯಮಗಳಿಗಿಂತ ಹೆಚ್ಚಾಗಿ ಪರಿಶುದ್ಧ ಪ್ರೇಮದ ಅಂಶವೇ ಪ್ರಧಾನವಾಗುತ್ತದೆ. ಅವತಾರ ಪುರುಷರು ಧರ್ಮವನ್ನು, ಅದರ ಸಂಕುಚಿತ ಸಂಕೋಲೆಗಳಿಂದ ಹೊರತಂದು, ಹೆಚ್ಚು ಸ್ವತಂತ್ರವಾಗಿಸುತ್ತಾರೆ. ಸಂಪ್ರದಾಯದ ವಿಧಿ–ನಿಷೇಧಗಳಿಗೆ ಮನ್ನಣೆ ನೀಡಿದರೂ ಅವನ್ನು ಮೀರಿ ಬೆಳೆಯುವುದನ್ನು ಮಾನವತೆಗೆ ಕಲಿಸಿಕೊಡುತ್ತಾರೆ. ಅದೆಷ್ಟು ಸಲ ಶ್ರೀಮಾತೆಯವರು ಎಲ್ಲ ನಿಯಮಗಳನ್ನು ಮೀರಿ ನಿಂತು, ಭಕ್ತರ ವ್ಯಾಕುಲತೆಯೊಂದಕ್ಕೇ ಬೆಲೆಕೊಟ್ಟು, ಅವರಿಗೆ ಮಂತ್ರದೀಕ್ಷೆಯನ್ನು ನೀಡಿದರು! ಹೆಂಡಕುಡುಕ ಪದ್ಮವಿನೋದ, 'ಡಕಾಯಿತ ತಾಯಿ ತಂದೆಯರು' ಮುಂತಾದ ಹಲವಾರು ಸಾಮಾನ್ಯ ಭಕ್ತರಿಗೆ ತಮ್ಮ ಶರೀರದಲ್ಲಿಯೇ ಅವರು ದೇವೀದರ್ಶನವನ್ನು ಮಾಡಿಸಿದರೆಂದರೆ, ಅವರಲ್ಲಿ ಅದೆಷ್ಟು ಔದಾರ್ಯವಿತ್ತು, ಊಹಿಸಿ ನೋಡಿ!

ಮಗೂ ನನಗೆ ಏನೂ ಗೊತ್ತಿಲ್ಲ; ಇನ್ನು ನಾನು ನಿನಗೆ ಏನು ಹೇಳಲಿ? ಶ್ರೀರಾಮಕೃಷ್ಣರ ಭಾವಚಿತ್ರವೊಂದನ್ನು ಸದಾ ಮುಂದಿಟ್ಟುಕೋ; ಮತ್ತು ನಿಶ್ಚಿತವಾಗಿ ತಿಳಿದುಕೋ, ಅವರು ಯಾವಾಗಲೂ ನಿನ್ನ ಜೊತೆಯಲ್ಲಿಯೇ ಇದ್ದಾರೆ ಎಂದು. ದುಃಖದಿಂದ ಕೂಡಿದ ನಿನ್ನ ಹೃದಯವನ್ನು ಅವರ ಮುಂದೆ ಬಿಚ್ಚಿಡು. ಕಣ್ಣೀರು ಕರೆದು ಪ್ರಾಮಾಣಿಕವಾಗಿ ಪ್ರಾರ್ಥಿಸು. ಹೀಗೆ ಪ್ರಾರ್ಥಿಸುವುದರಿಂದ ನಿನಗೆ ಮನಶ್ಶಾಂತಿ ದೊರೆಯುತ್ತದೆ. ಶ್ರೀರಾಮಕೃಷ್ಣರಲ್ಲಿ ಭಕ್ತಿಯನ್ನು ಬೆಳೆಸಿಕೋ, ಮತ್ತು ನೀನು ಸಂಕಟದಲ್ಲಿದ್ದಾಗ ಎಲ್ಲವನ್ನೂ ಅವರ ಮುಂದೆ ಹೇಳಿಕೋ.

– *ಶ್ರೀಮಾತೆ ಶಾರದಾದೇವಿ*

**ಉದಾರ ಚರಿತೆ – ಅದ್ಭುತ ಚರಿತೆ**

ಆಗಿನ ಕಾಲದಲ್ಲಿ ಕ್ರಾಂತಿಕಾರಿ ಎಂದು ಕರೆಯಬಹುದಾದ ಭಾವನೆಗಳನ್ನು ಶ್ರೀಮಾತೆಯವರು ತಮ್ಮ ಜೀವನದಲ್ಲಿ ವ್ಯಕ್ತಪಡಿಸಿದರೆಂಬುದನ್ನು ಮನಗಂಡಾಗ ನಾವು ಬೆರಗಾಗದೆ ಇರಲಾರೆವು. ಸಂಪ್ರದಾಯದ ಎಲ್ಲ ಮೌಢ್ಯ–ನಂಬಿಕೆಗಳಿಗೆ ಮಾನ್ಯತೆ ನೀಡಿಯೂ, ಅಪ್ಪ ನೆಟ್ಟ ಆಲದ ಮರಕ್ಕೆ ಜೋತು ಬೀಳದೆ ಅದೆಷ್ಟು ಸ್ವತಂತ್ರವಾಗಿ ಅವರು ಯೋಚಿಸುತ್ತಿದ್ದರು! ಬ್ರಹ್ಮಚಾರಿಗಳು ಚೆನ್ನಾಗಿ ಇಂಗ್ಲಿಷ್ ಮಾತನಾಡುವುದನ್ನು ಕಲಿಯಬೇಕು, ಮುಂದೆ ವಿದೇಶಗಳಿಂದ ಬರಲಿರುವ ಭಕ್ತರಿಗೆ ಧರ್ಮಬೋಧನೆ ಮಾಡಬೇಕಾಗುತ್ತದೆ ಎಂದೊಮ್ಮೆ ಅನ್ನುತ್ತಾರೆ; ಹೆಣ್ಣುಮಕ್ಕಳು ಕರಕುಶಲ ಕಲೆಗಳನ್ನು ಕಲಿತು, ಓದುಬರಹ ಕಲಿತು, ವಿದ್ಯಾವಂತರಾಗಿ ನಾಲ್ಕು ಜನರಿಗೆ ಸಹಾಯ ಮಾಡುವಂತಿರಬೇಕು ಎಂದು ಇನ್ನೊಮ್ಮೆ ನುಡಿಯುತ್ತಾರೆ. ಶ್ರೀಮಾತೆಯವರೊಮ್ಮೆ ಕಾಯಿಲೆ ಮಲಗಿದ್ದಾಗ, ಹಳ್ಳಿಗರೆಲ್ಲ ಊರದೇವತೆ ಸಿಂಹವಾಹಿನಿಗೆ ಆಡನ್ನು ಬಲಿಕೊಡಬೇಕು ಎಂದು ಅಭಿಪ್ರಾಯ ಪಟ್ಟರು. ಆಗ ಶ್ರೀಮಾತೆ ಮೂರ್ನಾಲ್ಕು ರೂಪಾಯಿ ನೀಡಿ ಬೇಕಾದಷ್ಟು ರಸಗುಲ್ಲಾಗಳನ್ನು ತರಿಸಿ ಅದನ್ನು ಸಿಂಹವಾಹಿನಿಗೆ ನೈವೇದ್ಯವಾಗಿ ಅರ್ಪಿಸಿ, ಊರಿನ ಜನರಿಗೆಲ್ಲ ಹಂಚುವಂತೆ ಹೇಳುತ್ತಾರೆ. ಹೀಗೆ ಶ್ರೀಮಾತೆಯವರು ಸಂಪ್ರದಾಯವನ್ನು ತಿರಸ್ಕರಿಸದೆ ಅದನ್ನು ಸುಧಾರಿಸಲು ಯತ್ನಿಸುತ್ತಾರೆ.

ಗೃಹಸ್ಥರಾಗಿದ್ದುಕೊಂಡು ಭಗವನ್ಮಯ ಜೀವನವನ್ನು ನಡೆಸುವ ರೀತಿಯನ್ನು ಶ್ರೀಮಾತೆ ಆಧುನಿಕ ಜಗತ್ತಿನ ಜನರಿಗೆ ತೋರಿಸಿಕೊಟ್ಟಿದ್ದಾರೆ. ತಮ್ಮ ವೃದ್ಧಾಪ್ಯದ ಅನಾರೋಗ್ಯದ ದಿನಗಳಲ್ಲಿಯೂ, ತಮಗೆ ಸಹಾಯಕ್ಕೆಂದು ಬಹಳಷ್ಟು ಭಕ್ತರು ಇರುವಾಗಲೂ, ಶ್ರೀಮಾತೆಯವರು ಅಡಿಗೆ ಮಾಡುತ್ತಿದ್ದರು ಮಾತ್ರವಲ್ಲ, ತಮ್ಮೆಲ್ಲ ಕೆಲಸಕಾರ್ಯಗಳನ್ನು ತಾವೇ ಮಾಡುತ್ತಿದ್ದರು. ಅವರು ಹೇಳುತ್ತಿದ್ದಂತೆ ಸದಾ ಉದ್ಯೋಗಶೀಲರಾಗಿರುವುದು ಒಳ್ಳೆಯದು ಎಂಬ ಅವರ ನುಡಿಗೆ ಅವರೇ ಆದರ್ಶ ನಿದರ್ಶನವಾಗಿದ್ದರು.

ತಮ್ಮ ಸಹಾಯಕ್ಕೆಂದು ಕೊನೆಯ ದಿನಗಳಲ್ಲಿ ನೇಮಿಸಿದ್ದ ಅಡಿಗೆಯವಳನ್ನು ಶ್ರೀಮಾತೆಯವರು ಚಿಕ್ಕಮ್ಮ ಎಂದು ಪ್ರೀತಿ-ಗೌರವಗಳಿಂದ ಕರೆಯುತ್ತಿದ್ದರು. ವಿಜಯದಶಮಿಯ ದಿನ ತಾವೇ ತಲೆಬಾಗಿ, ಅವಳಿಗೆ ನಮಸ್ಕಾರ ಮಾಡಿದರು! ಚಿಕಿತ್ಸೆ ನೀಡಲು ಬಂದಂತಹ ಆಯುರ್ವೇದ ವೈದ್ಯ ಶ್ಯಾಮದಾಸ ವಾಚಸ್ಪತಿಗೆ ನಮಸ್ಕಾರ ಮಾಡಲು ಬ್ರಾಹ್ಮಣಳಾದ ರಾಧಿಗೆ ಹೇಳಿದರು! ಬಂಗಾಳದಲ್ಲಿ, ಆಗಿನ ಕಾಲದಲ್ಲಿ, ವೈದ್ಯಜಾತಿಯವರು ಬ್ರಾಹ್ಮಣರಿಗಿಂತ ಕೀಳು ಎಂಬ ಭಾವನೆ ಇತ್ತು. ಕೆಲವು ಭಕ್ತರು ಅದಕ್ಕೆ ಆಕ್ಷೇಪಿಸಿದಾಗ ಶ್ರೀಮಾತೆ ಹೇಳುತ್ತಾರೆ, "ಅವನು ಪಂಡಿತ. ಅವನಂತೆ ಅರ್ಹತೆ ಉಳ್ಳವರಿಗಲ್ಲದೆ, ಇನ್ನಾರಿಗೆ ತಾನೆ ನಮಸ್ಕಾರ ಮಾಡಬೇಕು?" ಹೀಗೆ ಪ್ರತಿಯೊಬ್ಬ ವ್ಯಕ್ತಿಯನ್ನು ಗೌರವಿಸುವುದನ್ನು, ಪೊರಕೆಯಿಂದ ಹಿಡಿದು ಪ್ರತಿ ವಸ್ತುವನ್ನು ಆದರಿಸುವುದನ್ನೂ ಶ್ರೀಮಾತೆ ನಮಗೆ, ತಮ್ಮ ನಡತೆಯ ಮೂಲಕವೇ ಹೇಳಿಕೊಟ್ಟಿದ್ದಾರೆ.

ಪ್ರಬೋಧ ಬಾಬು ಎಂಬ ಭಕ್ತ ತನ್ನ ಓಡಾಟಕ್ಕಾಗಿ ಕುದುರೆಯನ್ನು ಕೊಂಡುಕೊಳ್ಳುವುದಾಗಿ ಹೇಳಿದ. ಅವನ ಆರ್ಥಿಕ ಸ್ಥಿತಿಗತಿಗಳನ್ನು ಬಲ್ಲ ಶ್ರೀಮಾತೆ, "ಕುದುರೆ ಬೇಡ, ಸೈಕಲ್ ಕೊಂಡುಕೋ" ಎಂದು ಹೇಳುತ್ತಾರೆ. ದೊಡ್ಡಸ್ತಿಕೆಯ ಪ್ರದರ್ಶನಕ್ಕೆಂದೂ ಅವಕಾಶ ಕೊಡದೆ, ಮಿತವ್ಯಯ ಮಾಡುವಂತೆ, ಶ್ರೀಮಾತೆಯವರು ಅವನಿಗೆ ಕಲಿಸಿಕೊಡುತ್ತಾರೆ. ಹಣದ ಕುರಿತಾಗಿ ಅನಾಸಕ್ತರಾಗಿದ್ದರೂ ಎಲ್ಲೂ ಎಚ್ಚರಗೆಡದೆ, ಅಪವ್ಯಯಕ್ಕೆ ಅವಕಾಶವಿಲ್ಲದಂತೆ, ಶ್ರೀಮಾತೆಯವರು ಸದಾ ಎಚ್ಚರವಾಗಿರುತ್ತಿದ್ದರು. ಶ್ರೀಮಾತೆ ಬಡ ಭಕ್ತನೊಬ್ಬನಿಗೆ ಹೇಳುತ್ತಾರೆ: "ಈಗಿನಿಂದಲೇ ಸ್ವಲ್ಪ ಹಣ ಕೂಡಿಟ್ಟರೆ ಮುಂದೆ ನಿನ್ನ ಕುಟುಂಬಕ್ಕೆ ದಾರಿಯಾಗುತ್ತದೆ. ಅನಾವಶ್ಯಕ ವೆಚ್ಚಗಳನ್ನು ತಪ್ಪಿಸಿ, ಉಳಿತಾಯ ಮಾಡು."

ಹೀಗೆ ಜೀವನದಲ್ಲಿ ಪ್ರತಿಯೊಂದು ಸನ್ನಿವೇಶದಲ್ಲಿಯೂ ಹೇಗೆ ಸೂಕ್ಷ್ಮ ವಿವೇಕಪ್ರಜ್ಞೆಯನ್ನು ಮೈಗೂಡಿಸಿಕೊಳ್ಳಬೇಕೆಂದು ಶ್ರೀಮಾತೆಯವರು ನಮಗೆ ಬೋಧಿಸುತ್ತಾರೆ. ಮೂರ್ಖರ ಹತ್ತಿರ, ಅಲ್ಪಬುದ್ಧಿಯ ಹಠಮಾರಿಗಳೊಂದಿಗೆ ಹೇಗೆ ಸಾವಧಾನದಿಂದ ವರ್ತಿಸಬೇಕು, ಎಲ್ಲ ಕಹಿಗಳನ್ನು ಮರೆತು, ಜೀರ್ಣಿಸಿಕೊಂಡು ಸಹಮಾನವರನ್ನು ಪ್ರೀತಿಯಿಂದ ಕಾಣುವ ಬಗೆ ಹೇಗೆ ಎಂಬುದನ್ನು ಅವರು ತಮ್ಮ ಜೀವನದುದ್ದಕ್ಕೂ ತೋರಿಸಿಕೊಟ್ಟಿದ್ದಾರೆ.

ಶ್ರೀ ಲಲಿತಾಸಹಸ್ರನಾಮದಲ್ಲಿ ಜಗನ್ಮಾತೆಯನ್ನು **'ಅನಘಾ-ಅದ್ಭುತಚಾರಿತ್ರಾ'** ಎಂದು ಸ್ತುತಿಸಲಾಗಿದೆ. ಶ್ರೀಮಾತೆಯವರಿಗೆ ಇದು ಅತ್ಯಂತ ಸೂಕ್ತವಾಗಿ ಅನ್ವಯಿಸುತ್ತದೆ. ಶ್ರೀಮಾತೆಯವರು ಸ್ವಯಂ **ಅನಘರಾಗಿದ್ದರು** (ಪಾಪವಿಲ್ಲದವರು). ಪರಮ ಪವಿತ್ರತಾ ಸ್ವರೂಪಿಣಿಯಾಗಿರುವ ಅವರು, ಆಶ್ರಯಿಸಿದವರೆಲ್ಲರ ಪಾಪಗಳನ್ನು ತೊಳೆದುಹಾಕುವರು. ಹಾಗೆಯೇ ಶ್ರೀಮಾತೆಯವರದು **ಅದ್ಭುತ ಚಾರಿತ್ರಾ** – ಸಹನೆಯಲ್ಲಿ, ವಾತ್ಸಲ್ಯದಲ್ಲಿ, ಗಾಂಭೀರ್ಯದಲ್ಲಿ, ನಿರಭಿಮಾನದಲ್ಲಿ, ದಿವ್ಯತೆಯ ಅಭಿವ್ಯಕ್ತಿಯಲ್ಲಿ – ಅಷ್ಟೇ ಸಂಯಮದಿಂದ ಅದನ್ನು ಮರೆಮಾಚುವಲ್ಲಿ, ತಾಯಿ ಶಾರದೆಯದು ಅದ್ಭುತ ಚಾರಿತ್ರ್ಯವೇ ಸರಿ. ಆ ಮಹಾ ಜೀವನದ ಧ್ಯಾನ-ಚಿಂತನದಲ್ಲಿ ನಮ್ಮ ಮನಸ್ಸು ಲಯವಾಗಲಿ, ಅವರ ಬಾಳಿನ ಬೆಳಕಿನ ರಾಶಿಯ ಆಸರೆಯಲ್ಲಿ, ನಮ್ಮ ಜೀವನವೂ ನಂದಾದೀಪವಾಗಲಿ. ✿

### ಶ್ರೀಮಾತೆಯವರೇ ಕುರಾನಿನ ಉಕ್ತಿಯನ್ನು ತೋರಿಸಿಕೊಟ್ಟರು!!

ಶ್ರೀಮಾತೆ ಶಾರದಾದೇವಿಯವರು ಕೈಗೊಂಡ "ದೀನದುಃಖಿಗಳ ಸೇವೆ" ಇಂದು ಕೂಡ ನಿರಾತಂಕವಾಗಿ ನಡೆಯುತ್ತಿದೆ. ಅದಕ್ಕೆ ಒಂದು ನಿದರ್ಶನ ಇದು:

ಲಕ್ನೋ ನಗರದ ರಾಮಕೃಷ್ಣ ಮಿಶನ್ ಒಂದು ದೊಡ್ಡ ಆಸ್ಪತ್ರೆಯನ್ನು ನಡೆಸುತ್ತಿದೆ. ಅಲ್ಲಿಗೆ ಕೆಲವು ವರ್ಷಗಳ ಹಿಂದೆ ಒಬ್ಬ ಮುಸ್ಲಿಂ ಕೂಲಿ ಹೆಂಗಸು ತನ್ನ ಮಗಳನ್ನು ಕರೆದುಕೊಂಡು ಬಂದಳು. ಆ ಹುಡುಗಿಯ ಮುಖದಲ್ಲಿ ಬೊಪ್ಪಳೆ (Blister) ಆಗಿತ್ತು. ಒಬ್ಬ ಅಲೋಪತಿ ಡಾಕ್ಟರ್ ಚಿಕಿತ್ಸೆ ಮಾಡಿದರು. ಬೊಕ್ಕೆ ಜಾಸ್ತಿಯಾಯಿತೇ ಹೊರತು ವಾಸಿಯಾಗಲಿಲ್ಲ. ನಂತರ ಹೋಮಿಯೋಪತಿ, ಆಯುರ್ವೇದ ಚಿಕಿತ್ಸೆಗಳು ಕೂಡ ನಡೆದವು. ಆದರೆ ಯಾವ ಪ್ರಯೋಜನವೂ ಆಗಲಿಲ್ಲ. ತಾಯಿ-ಮಕ್ಕಳಿಬ್ಬರೂ ನಿರಾಶರಾಗಿ, ಅಳುತ್ತಾ ಆಸ್ಪತ್ರೆಯಿಂದ ಹೊರಟುಹೋದರು. ಒಂದೆರಡು ವಾರಗಳ ನಂತರ ಆ ಕೂಲಿ ಹೆಂಗಸು ಮತ್ತೆ ಪ್ರಸನ್ನಮುಖದಿಂದ ಕಾಣಿಸಿಕೊಂಡಳು. ಆಕೆಯ ಮಗಳ ಮುಖದ ಮೇಲಿನ ಬೊಕ್ಕೆ ಈಗ ಸಂಪೂರ್ಣವಾಗಿ ವಾಸಿಯಾಗಿತ್ತು. ಬೊಕ್ಕೆ ಹೇಗೆ ವಾಸಿಯಾಯಿತು? –ಅದನ್ನು ಹೇಳುತ್ತಿದ್ದಾಗ ಆಕೆ ಆನಂದಾಶ್ರುವನ್ನು ಸುರಿಸುತ್ತಿದ್ದಳು.

"ಅದ್ಭುತವೇ ನಡೆದುಹೋಯಿತು! ಎಲ್ಲವೂ ಅಲ್ಲಾಹುವಿನ ಕೃಪೆ ! ಆಸ್ಪತ್ರೆಯಿಂದ ನಿರಾಶಳಾಗಿ ಅಳುತ್ತಾ ಮನೆಗೆ ಹೋದೆ. ಆ ರಾತ್ರಿ ಅಳುತ್ತಲೇ ಮಲಗಿಬಿಟ್ಟೆ. ನಿದ್ರೆಯಲ್ಲಿ ಒಂದು ಸ್ವಪ್ನ ಕಂಡೆ. ಶ್ರೀಮಾತೆ ನನ್ನ ಹತ್ತಿರ ಬಂದು ನನಗೆ ಅಳಬೇಡವೆಂದು ಹೇಳಿ ಆಶ್ವಾಸನೆಕೊಟ್ಟರು. "ನಿನ್ನ ಮಗಳು ಕುರಾನಿನ ಒಂದು ಉಕ್ತಿಯನ್ನು ಓದುತ್ತಾ, ನೀರು ಕುಡಿದರೆ ಬೊಕ್ಕೆ ಸಂಪೂರ್ಣವಾಗಿ ವಾಸಿಯಾಗುತ್ತದೆ" ಎಂದರು. ಹಾಗೂ ಶ್ರೀಮಾತೆಯವರೇ ಕುರಾನಿನ ಆ ಉಕ್ತಿಯನ್ನು ತೋರಿಸಿಕೊಟ್ಟರು!! ಬೆಳಗ್ಗೆ ಎದ್ದನಂತರ ನಾನು ಅವರ ನಿರ್ದೇಶನವನ್ನು ಪಾಲಿಸಿದೆ. ಪ್ರತಿದಿನವೂ ಮಗಳ ಮುಖದ ಮೇಲಿನ ಹುಣ್ಣು ಕಮ್ಮಿಯಾಗುತ್ತ ಬಂದು ಕ್ರಮೇಣ ಎಲ್ಲಾ ಸರಿಹೋಯಿತು." *(ಬಂಗಾಳಿ ಮೂಲ: ಪ್ರವ್ರಾಜಿಕಾ ಪ್ರಬುದ್ಧಪ್ರಾಣಾ : ಕನ್ನಡಾನುವಾದ: ಸ್ವಾಮಿ ಶಾಂತಿನಾಥಾನಂದ)*